Sri S. NIJALINGAPPA.—No such discrimination is made.

Sri G. N. PUTTANNA.—What is the meaning of 'under-graduates'?

Sri S. NIJALINGAPPA.—If my friend had not passed his degree examination, he would have been an under-graduate.

Introduction of Pension Scheme for the Employees of Local Bodies' Schools.

Q.—2822. Sri Y. VEERAPPA (Hole-Narsipur).—

Will the Government be pleased to state:—

whether there are any proposals to introduce pension scheme for the employees of Local Bodies' schools as has been done in the case of Corporation Schools of Bangalore City?

A.—Sri V. VENKATAPPA (Minister for Education).—

No.

Sri Y. VEERAPPA.—Sir, the answer to my question is indicated by the word 'No'. Why, Sir?

ಶ್ರೀ ವಿ. ವೆಂಕಟಪ್ಪ.—ಪೆನ್‌ಷನ್ ಕೊಡುವುದನ್ನು ಜಾರಿಗೆ ತಂದರೆ ಎಷ್ಟು ಖರ್ಚು ಬರುತ್ತದೆ, ಬೇರೆ ಏನಾದರೂ ಮಾಡುವುದಕ್ಕೆ ಸಾಧ್ಯವಿದೆಯೇ ಎಂಬುದನ್ನು investigate ಮಾಡಬೇಕಾಗಿದೆ. ಈಗಲೇ 'Yes' ಎಂದು ಹೇಳಲು ಸಾಧ್ಯವಿಲ್ಲ.

Sri Y. VEERAPPA.—Is there any directive by the Planning Commission to introduce pension scheme even in schools run by the local bodies?

ಶ್ರೀ ವಿ. ವೆಂಕಟಪ್ಪ.—ನನ್ನ ಗಮನಕ್ಕೆ ಬಂದಿಲ್ಲ.

Sri Y. VEERAPPA.—Is it not a fact that official committees were constituted to go into the merits and details in respect of revising the pay scales and D.A. to the employees of the local bodies?

Sri V. VENKATAPPA.—Yes.

Sri Y. VEERAPPA.—What is their specific recommendation, Sir?

ಶ್ರೀ ವಿ. ವೆಂಕಟಪ್ಪ.—ಇನ್‌ಷುರೆನ್ಸ್ ಪ್ರಾವಿಡೆಂಟ್ ಫಂಡ್ ಸ್ಕೀಮನ್ನು ಸೂಚನೆಮಾಡಿದ್ದಾರೆ. ಅದನ್ನು ಕಮಿಟಿಯವರು ಯೋಚನೆ ಮಾಡ ತ್ತಿದ್ದಾರೆ.

Sri Y. VEERAPPA.—When will it be implemented, Sir?

ಶ್ರೀ ವಿ. ವೆಂಕಟಪ್ಪ.—ಆದಷ್ಟು ಜಾಗ್ರತೆ ಮಾಡುತ್ತೇವೆ. ಅದನ್ನು ಪರಿಶೀಲಿಸುತ್ತಾ ಇದ್ದೇವೆ.

Sri J. B. MALLARADHYA.—Are the Government aware that in the Madras Government Border areas, they have extended the scheme of pension in some educational institutions and aided schools?

ಶ್ರೀ ವಿ. ವೆಂಕಟಪ್ಪ.—ನನ್ನ ಹತ್ತಿರವಿದ್ದ notes ಪ್ರಕಾರ ಬೇರೆ ರಾಜ್ಯಗಳಲ್ಲಿ ಮಾಡಿಲ್ಲವೆಂದು ಇದೆ. ಅದನ್ನು ವಿಚಾರಿಸುತ್ತೇನೆ.

Sri J. B. MALLARADHYA.—There is a scheme of pension *cum* insurance *cum* provident fund. Are the Government aware of the existence of such a scheme in operation in the border areas of the old Madras State?

ಶ್ರೀ ವಿ. ವೆಂಕಟಪ್ಪ.—ಪ್ರಾವಿಡೆಂಟ್ ಫಂಡ್ ಇನ್‌ಷುರೆನ್ಸ್ ಸ್ಕೀಮ್-ಎಂದು ಇದೆ.

---

2 P.M.

Business of the House.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಗುಬ್ಬಿ).—ಪ್ರಿವಿಲೇಜ್ ಮೋಷನ್ ಯಾವಾಗ ತೆಗೆದುಕೊಳ್ಳಲಾಗುವುದು?

ಉಪಾಧ್ಯಕ್ಷರು.—ಆರನೆಯ ತಾರೀಖು.

Sri V. S. PATIL (Belgaum I).—I had sent in an adjournment motion. I do not know what has happened to it.

Mr. DEPUTY SPEAKER.—An endorsement is under issue.

NON-OFFICIAL RESOLUTIONS

No. 2—Promoting the educational and economic interests of the weaker sections of the people.

(*Debate continued.*)

*ಶ್ರೀ ಯು ಎಂ. ಮಾದಪ್ಪ (ಚಾಮರಾಜನಗರ).—ಸ್ವಾಮಿ, ಸಭೆಯು ಮುಂದಿರುವ ಈ ನಿರ್ಣಯವನ್ನು ಸರ್ಕಾರದ ಪಕ್ಷದ ಮುಖ್ಯ ಸದಸ್ಯರೊಬ್ಬರು ತಂದಿರುವುದು ಬಹಳ ಸ್ವಾಗತಾರ್ಹವಾದ ವಿಷಯ. ಆದರೆ ನಾನು ಇದನ್ನು ಅನುಮೋದಿಸುತ್ತಾ ಈ ನಿರ್ಣಯವು ಎಷ್ಟು ಮುಖ್ಯವೋ ಅದೇರೀತಿ ಸಂಬಂಧಪಟ್ಟ ಸದಸ್ಯರು ವಾಪಸು ತೆಗೆದುಕೊಳ್ಳದಿರುವುದೂ ಬಹಳ ಮುಖ್ಯವಾದುದು ಎಂದು ಒತ್ತಾಯಪಡಿಸಬೇಕಾಗಿ ಬಂದಿದೆ. ಆದ್ದರಿಂದ ಸದಸ್ಯರು ಈ ನಿರ್ಣಯವನ್ನು ವಾಪಸು ತೆಗೆದುಕೊಳ್ಳುವುದಿಲ್ಲವೆಂಬ ಭರವಸೆಯಿಂದ ಇದನ್ನು ಸಮರ್ಥಿಸುತ್ತಾ ಒಂದೆರಡು ವಿಷಯ ಮಾತ್ರ ಹೇಳಬೇಕಾಗಿ ಬರುತ್ತದೆ. ಈ ನಿರ್ಣಯದಲ್ಲಿರತಕ್ಕ ವಿಷಯ ಹೊಸದೇನೂ ಅಲ್ಲ. ರಾಜ್ಯಾಂಗದಲ್ಲಿ 46 ಮತ್ತು 15 (4)ನೆಯ ಆರ್ಟಿಕಲ್ಲುಗಳಲ್ಲಿ ನಮೂದಿಸಿರುವ ನಿರ್ದೇಶಕ್ಕನುಗುಣವಾಗಿ ಈ ನಿರ್ಣಯ

ಬಂದಿದೆ. ಅಲ್ಲಿ ಯಾವ ಪದವಿದೆಯೋ ಅದೇ ಪದವನ್ನು, ಅದೇ ವಾಕ್ಯವನ್ನು ಈ ನಿರ್ಣಯದಲ್ಲಿ ಸೂಚಿಸಿದ್ದಾರೆಂದು ತಿಳಿದುಕೊಂಡಿದ್ದೇನೆ ಮತ್ತು ಅದು ನನಗೆ ಅರಿವಾಗಿದೆ. ನಿರ್ಣಯವನ್ನು ಸರ್ಕಾರದವರು ಕಳೆದ ಐದು ವರ್ಷಗಳಲ್ಲಿ ಮಾಡಬೇಕಾದ್ದನ್ನು ಮಾಡಿಲ್ಲವೆಂದು ಸರ್ಕಾರಿ ಪಕ್ಷಕ್ಕೆ ಸೇರಿರುವ ಸದಸ್ಯರೇ ತಂದಿರುವುದು ಪೂರ್ಣವಾಗಿ ಅರಿವಾಗಿದೆ, ಸಭೆ ಮತ್ತು ಸರ್ಕಾರದವರು ಮಾಡಬೇಕಾದ ಕೆಲಸ ಮಾಡಿಲ್ಲವೆಂದು ಹೇಳುವುದಕ್ಕೆ ಅವಕಾಶ ಸಿಕ್ಕಿದೆ. ಅದೇ ನಾವು ಕೇಳಿದರೆ ನಾವು ಮಾಡಿದ್ದೇವೆಂದು ತಾವು ವಾದ ಮಾಡುತ್ತಿದ್ದಿರಿ. ನಾವು ಹೇಳುತ್ತಿದ್ದುದನ್ನು ಸುಳ್ಳು ಎಂದು ಹೇಳುತ್ತಿದ್ದ ಪಕ್ಷದವರೇ ಈ ನಿರ್ಣಯವನ್ನು ತಂದಿರುವುದಕ್ಕಾಗಿ ಶ್ರೀ ರಾಚಯ್ಯನವರಿಗೆ ವಂದನೆಯನ್ನರ್ಪಿಸುತ್ತೇನೆ.

ಇವರಲ್ಲಿ ಎರಡು ವಿಷಯಗಳಿವೆ. ಮೊದಲನೆಯದಾಗಿ ಷೆಡ್ಯೂಲ್ಡ್ ಕ್ಯಾಸ್ಟ್ಸ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್, ಎರಡನೆಯದಾಗಿ ಬ್ಯಾಕ್‌ವರ್ಡ್ ಕ್ಲಾಸಸ್ ಎಂದು ಎರಡು ಭಾಗ ನಾವು ಮಾಡಿದ್ದುರೆ ಈ ವಿಷಯಕ್ಕೆ ಅಷ್ಟೊಂದು ಗಮನಕೊಟ್ಟಂತಾಗುವುದಿಲ್ಲ. ಏಕೆಂದರೆ ರಾಜ್ಯಾಂಗದಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್ಸ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್‌ಗೆ ರಕ್ಷಣೆಯಿದೆ, ಬ್ಯಾಕ್‌ವರ್ಡ್ ಕ್ಲಾಸಸ್‌ಗೆ ಪ್ರತ್ಯೇಕವಾಗಿ ಏನೂ ರಕ್ಷಣೆಯಿಲ್ಲ. ಈ ದಿವನ ಹೊನ ಕರ್ಣಾಟಕ ಭಾಗಗಳಲ್ಲಿರುವ ಹಿಂದುಳಿದ ಪಂಗಡಗಳವರಿಗೆ ಅಲ್ಲಿ ಸ್ವಲ್ಪ ಅನುಕೂಲ ಮಾಡಿರಬಹುದು. ಆದರೆ ಹಳೆಯ ಮೈಸೂರಿನಲ್ಲಿ ಖಂಡಿತ ಯಾವ ವಿಧವಾದ ಸಹಾಯ, ಸಹಕಾರಗಳು ಸರ್ಕಾರದಿಂದ ದೊರೆತಿಲ್ಲ, ಈ ದಿವಸ ದೊರೆಯಬೇಕು, ರಾಜ್ಯಾಂಗದಲ್ಲಿರುವುದನ್ನು ಜಾರಿಗೆ ತಂದಿಲ್ಲ ಎಂದು ಹೇಳಬೇಕಾಗಿದೆ. ರಾಜ್ಯಾಂಗದಲ್ಲಿರುವ ರಕ್ಷಣೆಯನ್ನು ಬಲಹೀನ ವರ್ಗದವರಿಗೆ ಒದಗಿಸಬೇಕು. ಈ ಕಾರ್ಯವನ್ನು ಜಾತಿಯ ಆಧಾರದಮೇಲೆ ಮಾಡಬೇಡಿ, ಕೋಮುವಾರು ಭಾವನೆ ಮತ್ತೆ ಮತ್ತೆ ತಲೆಯೆತ್ತುವಂತೆ ಮಾಡಬೇಡಿ, ಹಿಂದುಳಿದವರಿಗೆ ಸಹಾಯ ಮಾಡುವಾಗ ಕೋಮುವಾರು ಪ್ರಶ್ನೆ ಬರಬಾರದು, ಕೋಮುವಾರು ಪ್ರಶ್ನೆಯಮೇಲೆ ಹತೋಟಿಯಿಡಬೇಕೇ ವಿನಾ ಮತ್ತೆ ಆ ನೀತಿ ಪರಿಪಾಲನವಾಗದು ಎಂದು ಎಚ್ಚರಿಕೆ ಕೊಡುತ್ತೇನೆ. ಈ ದಿವಸ ಷೆಡ್ಯೂಲ್ಡ್ ಕ್ಯಾಸ್ಟ್‌ಗೆ ಸೇರಿದ ಜನಾಂಗಗಳುಯಾವುವೆಂದು ತಿಳಿದುಕೊಳ್ಳುವುದೇ ಕಷ್ಟವಾಗಿದೆ. ಹಳೆಯ ಮೈಸೂರಿನಲ್ಲಿ 19 ಜನಾಂಗಗಳು ಷೆಡ್ಯೂಲ್ಡ್ ಕ್ಯಾಸ್ಟಿಗೆ ಸೇರುತ್ತವೆಂದು ಹೇಳಿದ್ದರು. ಈ ದಿವನ ಯಾವಯಾವ ಜನಾಂಗಗಳು ಸೇರಿವೆಯೆಂದು ಕೇಳಿದರೆ ಹೇಳುವುದು ಕಷ್ಟವೆಂದು ಮಂತ್ರಿಗಳು ಹೇಳುತ್ತಾರೆ. ಷೆಡ್ಯೂಲ್ಡ್ ಟ್ರೈಬ್ಸ್‌ನವರು ಯಾರು, ಷೆಡ್ಯೂಲ್ಡ್ ಕ್ಯಾಸ್ಟ್‌ನವರು ಯಾರು ಎಂದು ಸಭೆ ತಿಳಿದುಕೊಳ್ಳುವುದಕ್ಕೆ ಅವಕಾಶ ಮಾಡಬೇಕು. ಷೆಡ್ಯೂಲ್ಡ್ ಕ್ಯಾಸ್ಟ್‌ನವರು ಎಂದರೆ ಹರಿಜನರು ಎಂಬ ಭಾವನೆಯಿದೆ ಎಂದು ಧೈರ್ಯವಾಗಿ ಹೇಳಬಹುದು. ಷೆಡ್ಯೂಲ್ಡ್‌ಕ್ಯಾಸ್ಟ್ ಎಂದು ಪ್ರತಿಪಾದನೆ ಮಾಡುವಾಗ ಅದಕ್ಕೆ ಯಾರು ಯಾರು ಸೇರಿವಾರೆ, ಅನ್ಯಾತ್ಯರೆಲ್ಲರೂ ಅದರಲ್ಲಿ ಸೇರಿದ್ದಾರೆಯೇ ಎಂಬುದನ್ನು ಸರ್ಕಾರದವರು ಖಚಿತವಾಗಿ ಹೇಳಬೇಕು.

ಶ್ರೀ ಆರ್. ಚೆನ್ನಿಗರಾಮಯ್ಯ (ಸ್ಥಳೀಯ ಪ್ರಜಾಧಿಕಾರ ಶಾಖೆಯ ಮಂತ್ರಿಗಳು).—ಅಚ್ಚುಹಾಕಿಸಿ ಒದಗಿಸಿರುವ ಪ್ರಶ್ನೋತ್ತರದಲ್ಲಿ ಅದನ್ನು ಸೂಚಿಸಿದೆ.

ಶ್ರೀ ಯು. ಎಂ. ಮಾದಪ್ಪ.—ಒಂದೊಂದು ವರ್ಷ ಒಂದೊಂದು ಉತ್ತರ ಬಂದಿರುವುದರಿಂದ ಮತ್ತೆ ಕೇಳಬೇಕಾಗಿದೆ. ಒಂದೊಂದು ವರ್ಷ ಒಂದೊಂದು ಜನಾಂಗ ಬಿಟ್ಟುಹೋಗಿರುವುದರಿಂದ ಷೆಡ್ಯೂಲ್ಡ್ ಕ್ಯಾಸ್ಟ್ ನವರು ಯಾರೆಂದು ತಿಳಿದುಕೊಳ್ಳುವುದು ಕಷ್ಟವಾಗಿದೆ. ಸರ್ಕಾರ ಗೆಜೆಟ್ ನೋಟಿಫಿಕೇಷನ್ ಹೊರಡಿಸಿ ಸಂಬಂಧಪಟ್ಟ ಅಧಿಕಾರಿಗಳಿಗೆ ಸರಿಯಾದ ಸೂಚನೆ ಕೊಟ್ಟು ಖಚಿತವಾಗಿ ತಿಳಿಸಬೇಕು. ಷೆಡ್ಯೂಲ್ಡ್ ಕ್ಯಾಸ್ಟ್ಸ್‌ನವರನ್ನೂ ವೀಕರ್ ಸೆಕ್ಷನ್, ಫಾರ್ವರ್ಡ್ ಸೆಕ್ಷನ್ ಎಂದು ಎರಡು ಭಾಗ ಮಾಡಬೇಕು; ಇಲ್ಲದಿದ್ದರೆ ಅನ್ಯಾಯವಾಗುತ್ತದೆ. ಅದರಲ್ಲೂ ಆರ್ಥಿಕವಾಗಿ, ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಅತ್ಯಂತ ಬಲಹೀನರು ಯಾರೆಂಬುದನ್ನು ನಿರ್ಧರಿಸಿ ಅವರಿಗೆ ಸರ್ವವಿಧವಾದ ಅನುಕೂಲಗಳನ್ನೊದಗಿಸಬೇಕು. ಕೋಮುವಾರು ಭಾವನೆ ಬಿಟ್ಟು ಎಲ್ಲ ಜನಾಂಗದಲ್ಲೂ ಹಿಂದುಳಿದವರು, ಮುಂದುವರಿದವರು ಎಂದು ಎರಡು ಭಾಗ ಮಾಡಬೇಕು. ಹಾಗೆ ಮಾಡುವಾಗ ಸ್ಟೇಟ್ ಲೆವಲ್ ನಲ್ಲಿ ಮೊದಲೆ ತಾಲ್ಲೂಕು ಲೆವಲ್‌ನಲ್ಲಿ, ಗ್ರಾಮಗಳ ಲೆವಲ್‌ನಲ್ಲಿ ಅಂಕಿ ಅಂಶ ಸಂಗ್ರಹಿಸಬೇಕು. ಪ್ರತಿಯೊಂದು ಗ್ರಾಮದಲ್ಲೂ ಆರ್ಥಿಕ ಮಟ್ಟ, ಸಾಮಾಜಿಕ ಮಟ್ಟ ಮತ್ತು ಶೈಕ್ಷಣಿಕ ಮಟ್ಟ ಹೆಚ್ಚಬೇಕು. ಹಾಗೆ ಮಾಡಬೇಕಾದರೆ ಪಂಚಾಯಿತಿ ಸರಿಯಾಗಿ ಕೆಲಸ ಮಾಡಬೇಕು, ಪಂಚಾಯಿತಿ ಲೆವಲ್‌ನಲ್ಲಿ ಅಧಿಕಾರಿಗಳು, ಸದಸ್ಯರು, ಗ್ರಾಮದ ಮುಖಂಡರು, ರಾಜಕೀಯ ಮುಖಂಡರು ಸಹಕರಿಸಿ ಕೆಲಸ ಮಾಡಲು ಒಂದು ಆರ್ಗನೈಜೇಷನ್ ಈ ದಿವನ ಅವಶ್ಯಕ. ಅದನ್ನು ಮಾಡುವಾಗ ನಿಮ್ಮ ಪಕ್ಷವೊಂದನ್ನೇ ಬೆಳೆಸುವ ಪ್ರಯತ್ನ ಮಾಡಬೇಡಿ, ಪೊಲಿಟಿಕಲ್ ಕಲರ್ ಕೊಡಬೇಡಿ, ಸರ್ವತೋಮುಖವಾದ ಬೆಳವಣಿಗೆಗೆ ಅವಕಾಶ ಕೊಡಿ ಎಂದು ಎಚ್ಚರಿಸಬೇಕಾಗಿದೆ. ಇದು ಮಾನವನ ಕಲ್ಯಾಣದ ಪ್ರಶ್ನೆ. ಇದನ್ನು ಮೊಟಕು ಮಾಡುವ ನೀತಿಯನ್ನನುಸರಿಸಬಾರದು. ವೀಕರ್ ಸೆಕ್ಷನ್ ಎಂದು ಹೇಳುವಾಗ ಅಫಿಷಿಯರ್ಸ್, ಹಿಂದೆ ದಿವಾನರಾಗಿದ್ದವರ ಮಕ್ಕಳು, ದೊಡ್ಡ ದೊಡ್ಡ ಅಧಿಕಾರಿಗಳು ಮತ್ತು ಶಾಸನಸಭಾಸದಸ್ಯರ ಮಕ್ಕಳು, ಮಂತ್ರಿಗಳ ಮಕ್ಕಳು, ಅಳಿಯಂದಿರು, ಅವರ ಸ್ಥಾನಮಾನಗಳು ಮುಂತಾದವನ್ನು ಎಚ್ಚರಿಕೆಯಿಂದ ನೋಡಿ. ಈ ದಿವನ ದೊಡ್ಡವರ ಮಕ್ಕಳು ಸಾಮಾನ್ಯವಾಗಿ ಪ್ರತಿಯೊಬ್ಬರೂ ಸೆಕ್ರೆಟೇರಿಯಟ್‌ನಲ್ಲಿರುತ್ತಾರೆ. ರೈತರ ಮಕ್ಕಳು, ಗ್ರಾಮಾಂತರಗಳಲ್ಲಿರುವ ಜನರ ಮಕ್ಕಳು ಮುಂದುವರಿಯುವುದು ಕಷ್ಟ. ಅಧಿಕಾರಿಗಳಿಗೆ ಮುಖ್ಯವಾಗಿ ಇಫ್ಲ್ಯುಯನ್ಸ್ ಇರುತ್ತದೆ. ಕೆಲವು ಅಧಿಕಾರಿಗಳು ಪಬ್ಲಿಕ್ ಸರ್ವಿಸ್ ಕಮಿಷನ್‌ನಲ್ಲಿರುತ್ತಾರೆ. ಅವರಿಗೆ ಸುಖಸಂಪತ್ತುಗಳಿರುತ್ತವೆ. ಏನೂ ತಿಳಿಯದಿರುವ, ಯಾವ ಸಹಾಯವೂ ಇಲ್ಲದಿರುವ ಜನರು ಮುಂದುವರಿಯುವುದು ಕಷ್ಟ. ಕೆಲಸ ಕೊಡುವಾಗ, ಸಹಾಯ ಮಾಡುವಾಗ ವೀಕರ್ ಸೆಕ್ಷನ್ ಗಮನದಲ್ಲಿಡಬೇಕು, ಜಾತಿಗೆ ಹೆಚ್ಚು ಪ್ರಾಧಾನ್ಯತೆ ಕೊಡಬಾರದು. ಸಾಮಾನ್ಯವಾಗಿ ಗ್ರಾಮಾಂತರಗಳಲ್ಲಿರುವವರು ವೀಕರ್ ಸೆಕ್ಷನ್‌ಗೆ ಸೇರಿದವರೆಂದು ಹೇಳಬಹುದು. ಅವರಿಗೆ ಮುಂದೆ ಬಂದು ಅನುಕೂಲ ಪಡೆಯುವ ಶಕ್ತಿಯಿಲ್ಲ.

ಇನ್ನೊಂದು ಸಣ್ಣ ವಿಷಯದ ಕಡೆ ಗಮನ ಕೊಡಬೇಕು. ಕುರುಡರು, ಮೂಕರು, ಕಿವುಡರು, ಅಂಗಹೀನರು ಮುಂತಾದವರು ಸಮಾಜದ ಅತ್ಯಂತ ಬಲಹೀನರು. ಅವರ ಜೀವನೋಪಾಯಕ್ಕೆ ಸರ್ಕಾರ ಸರಿಯಾದ ವ್ಯವಸ್ಥೆ ಮಾಡಿಲ್ಲ. ಏನು ಮಾಡಿದೆಯೆಂದು ಕೇಳಿದರೆ ಯಾವುದೋ ಒಂದು ಆರ್ಗನೈಜೇಷನ್ ಇದೆಯೆಂದು ಆ ಕಡೆಗೆ ಕೈತೋರಿಸುತ್ತಾರೆ. ಎಗ್ಮಿಬರ್ಷನ್‌ಗೆ ಹೋದರೆ ಅಲ್ಲಿ ಅಂಗಹೀನರದೇ ಒಂದು ದೊಡ್ಡ ಎಗ್ಮಿಬರ್ಷನ್, ಅವರು ಬಂದವರನ್ನು ಕಾಸು ಕೇಳುತ್ತಾ ಇರುತ್ತಾರೆ.

(ಶ್ರೀ ಯು. ಎಂ. ಮಾದಪ್ಪ)

ಸರ್ ಮಿರ್ಜಾರವರ ಕಾಲದಲ್ಲಿ ಅವರಿಗಾಗಿ ಏರ್ಪಡಿಸಿದ ಸ್ಕೂಲು ನಿಧಾನವಾಗಿ ನಡೆಯುತ್ತಿದೆ. ಇಂಥ ಸ್ಕೂಲ್ ಪಾಯಿನರ್ ಅವರಿಗೆ ಕೊಡಬಾರದು. ಮುಂದಾದರೂ ಅವರಿಗೆ ಬೇಕಾದ ಸಹಾಯ ಮಾಡಿ ಅವರು ತಮ್ಮ ಕಾಲಮೇಲೆ ನಿಂತುಕೊಳ್ಳುವುದಕ್ಕೆ ಅವಕಾಶವಾಗುವಂತೆ ಸಾಕಷ್ಟು ಗ್ರಾಂಟು ಕೊಡಿ. ಅಂಗಹೀನರನ್ನು ಒಂದು ಸಲ ಕೇಳಿದಾಗ ಸಾಕಾದಷ್ಟು ಗ್ರಾಂಟು ಕೊಡುತ್ತಿಲ್ಲವೆಂದು ಕಣ್ಣೀರು ಹಾಕಿದರು. ಅಂಗಹೀನರಿಗಾಗಿ ಒಬ್ಬ ಸರ್ಕಾರಿ ಅಧಿಕಾರಿ ಇದ್ದಾರೆ. ಅವರಿಗೆ ಬೇಕಾದ ಕೈಗಾರಿಕೆ ವಗೈರೆ ಸ್ಥಾಪಿಸಿ ಅವರು ಜೀವನ ನಡೆಸಲು ಅವಕಾಶ ಮಾಡಿಕೊಡಬೇಕು, ಅವರ ಹೊಟ್ಟೆ ಬಟ್ಟೆಗೆ ಸಹಾಯವಾಗುವಂತೆ ವ್ಯವಸ್ಥೆ ಮಾಡಬೇಕು. ಈ ವರ್ಗದ ಜನರ ಸುಖವನ್ನು ನೋಡಿಕೊಳ್ಳದಿದ್ದಲ್ಲಿ ಸರ್ಕಾರ ಏದ್ದರೂ ಒಂದೇ, ಇಲ್ಲದಿದ್ದರೂ ಒಂದೇ.

ಕೊನೆಯದಾಗಿ ಒಂದು ವಿಷಯವನ್ನು ಹೇಳಬೇಕಾಗಿ ಬಂದಿದೆ. ಕೆಲವರು ಬೀದಿ ಭಿಕಾರಿಗಳಾಗಿ ನಿಂತಿರುತ್ತಾರೆ. ಅಂಥವರಿಗೆ ಏನು ಮಾಡಿದ್ದೀರಿ? ಭಿಕ್ಷುಕರ ಕಾಲೊನಿ ಇದೆ. ಮತ್ತು ಭಿಕ್ಷಾಟನೆಯನ್ನು ತಪ್ಪಿಸುವ ಕಾನೂನು ಇದೆ. ಆ ಕಾನೂನಿನ ಪ್ರಕಾರ ಶಿಕ್ಷೆ ಮಾಡುವುದಲ್ಲ, ಅವರಿಗೆ ಕೈಗಾರಿಕೆಗಳಲ್ಲಿ ಸಾಕಾದಷ್ಟು ತರಬೇತನ್ನು ಕೊಟ್ಟು ಅವರು ಮುಂದೆ ಸ್ವಂತವಾಗಿ ತಮ್ಮ ಜೀವನವನ್ನು ನಡೆಸಿಕೊಳ್ಳುವುದಕ್ಕೆ ಬೇಕಾಗುವಂಥ ಏರ್ಪಾಡುಗಳನ್ನೇನೂ ಮಾಡಿಲ್ಲ. ಯಾವನೇ ಆಗಲಿ, ಭಿಕಾರಿಯಾಗಿರದಂತೆ ನೋಡಿಕೊಳ್ಳಬೇಕು. ಪಟ್ಟಣಗಳಲ್ಲಿ ನೋಡಿದರೂ, ಮತ್ತೆಲ್ಲಿ ನೋಡಿದರೂ ಕಣ್ಣಿಲ್ಲ, ಕಾಲಿಲ್ಲ, ಜೀವನ ಮಾಡುವುದಕ್ಕೆ ಮಾರ್ಗವಿಲ್ಲ ಎಂದು ಭಿಕ್ಷೆ ಬೇಡುತ್ತಾರೆ. ಇವರಿಗೆಲ್ಲ ಕೆಲಸ ಮಾಡಲು ಕೆಲಸ ಸಿಕ್ಕುವಂತೆ ಮಾಡಬೇಕು. ಇವರಿಗೆ ಪೂರ್ಣವಾಗಿ ಕೆಲಸ ಕೊಡಿಸುವಂಥ ಒಂದು ಶಕ್ತಿಯನ್ನು ಸರ್ಕಾರ ಕಳೆದುಕೊಂಡಿದ್ದರೆ, ಆ ಸರ್ಕಾರ ಏಕೆ ಇರಬೇಕು ಎಂದು ಹೇಳುತ್ತೇನೆ.

ಮುದುಕರ ಪ್ರಶ್ನೆ. ಮಕ್ಕಳು ತಾವು ಚೆನ್ನಾಗಿ ನೆಂಪಾದನೆ ಮಾಡುವವರೆಗೂ, ತಂದೆ ತಾಯಿಗಳಿಂದ ಸಾಕಿಸಿಕೊಳ್ಳುವವರೆಗೂ ಇರುತ್ತಾರೆ. ಅನಂತರ ಬೇರೆ ಹೊರಟುಹೋಗುತ್ತಾರೆ. ಅನಂತರ ತಂದೆ ತಾಯಿಗಳ ಗೋಳನ್ನು ನೋಡುವುದಕ್ಕೆ ಸಾಧ್ಯವಿಲ್ಲ. ಸರ್ಕಾರದವರು ಇಂಥವರ ಯೋಗಕ್ಷೇಮವನ್ನು ನೋಡಿಕೊಳ್ಳಬೇಕು. ಇಂಗ್ಲೆಂಡಿನಲ್ಲಿ ಈ ರೀತಿಯ ಒಂದು ಪದ್ಧತಿ ಇದೆ. ಇದನ್ನು ಸರ್ಕಾರದವರು ಜಾರಿಗೆ ತರಬೇಕು. ಇದು ಸೋಷಿಯಲಸ್ಟಿಕ್ ಪ್ಯಾಟರ್ನ್ ಆಫ್ ಸೊಸೈಟಿ ಆಗಬೇಕಾಗಿದ್ದರೆ, ಆಸ್ತಿಯನ್ನು ಸಂಪಾದನೆ ಮಾಡಬೇಕೆಂಬ ಆಸೆ ಆಕಾಂಕ್ಷೆ ಹೆಚ್ಚುತ್ತಿರುವ ಕಾಲದಲ್ಲಿ ಸಾಮಾಜಿಕ ವ್ಯವಸ್ಥೆಯನ್ನು ಮಾಡದೆ ಇದ್ದರೆ, ಸ್ವಪ್ನಪ್ರಪಂಚದಲ್ಲಿ ಸಮಾಜದ ಪುನರ್ರಚನೆ ಮಾಡುತ್ತೇವೆ ಎನ್ನುವಂತೆ ಅದು ಸ್ವಪ್ನವಾಗಿ ಇರುತ್ತದೆ. ಜನರ ಕ್ಷೇಮ ಸಾಧನೆ ಮಾಡುವೆ ಇದ್ದರೆ ಬರೀ ಘೋಷಣೆಗಳಿಂದ ಪ್ರಯೋಜನವೇನು? ಈ ಕಾರ್ಯವನ್ನು ಒಮ್ಮನಸ್ಸಿನಿಂದ ಮಾಡಬೇಕು. ಅಲ್ಪಸ್ವಲ್ಪ ಮನಸ್ಸಿನಿಂದ, ಮನಸ್ಸಿಲ್ಲದ ಮನಸ್ಸಿನಿಂದ ಪ್ರಯತ್ನ.....

Sri H. C. LINGA REDDY (Malur).—Why are you pessimistic?

ಶ್ರೀ ಯು. ಎಂ. ಮಾದಪ್ಪ.—ನಾನು ಹಾಗಿಲ್ಲ. ಇವೊತ್ತಿನ ದಿವಸ ಮಾನ್ಯ ಸದಸ್ಯರು ತಂದಿರತಕ್ಕ ನಿರ್ಣಯವೇ ನಾನು ಹೇಳುವುದಕ್ಕೆ ಸಾಕ್ಷಿಯಾಗಿದೆ. Socialistic pattern ವಿಷಯವಾಗಿ ನೀವು ಏನು ಮಾಡಬೇಕೆಂದಿದ್ದೀರಿ ಎಂದು ಕೇಳುತ್ತಿದ್ದೇನೆ. ರಾಜ್ಯಾಂಗದಲ್ಲಿ ನಮ್ಮೂದಿಸಿದಂಥ protective principle ಆರು ವರ್ಷಗಳಾದರೂ ಸಹ ಕಾರ್ಯಗತ ಮಾಡಿಲ್ಲ, ಪ್ರಯತ್ನವನ್ನೂ ಮಾಡಿಲ್ಲ. ನಿಮ್ಮ ನಿಮ್ಮಲ್ಲೇ ಕಿತ್ತಾಡುತ್ತ, ಕುಳಿತಿದ್ದೀರಿ ಎಂದು ಹೇಳುವುದಕ್ಕೆ ಈ ನಿರ್ಣಯ ಬಂದಿರುವುದು ಒಂದು ಸಾಕ್ಷಿ.

Sri H. C. LINGA REDDY.—We are very optimistic.

ಶ್ರೀ ಯು. ಎಂ. ಮಾದಪ್ಪ.—ಇನ್ನು ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ.

Scheduled Castes ಮತ್ತು Scheduled Tribes ಇವರ ಅಭಿವೃದ್ಧಿಗೆ ಸಂಬಂಧಪಟ್ಟ ಕೆಲಸ ಕಾರ್ಯಗಳ ನಲುವಾಗಿ ಸ್ಪೆಷಲ್ ಆಫೀಸರುಗಳಿದ್ದಾರೆ. ಇವರ ಮುಖಾಂತರ ನಿಮ್ಮ ತರಗತಿಗಳವರಿಗೆ ಹೆಂಚು ವಗೈರೆ ಸಾಮಾನುಗಳನ್ನು ಮನೆ ಕಟ್ಟಲು ಕೊಡುವ ಏರ್ಪಾಡಿದೆ. ಇದರಲ್ಲಿ ಕಾಲುಭಾಗ ಸಹ ಇವರಿಗೆ ದೊರೆಯುತ್ತಿಲ್ಲ. ಅಮಲ್ದಾರರಿಗೆ ಅರ್ಧ ಭಾಗ, ಸ್ಪೆಷಲ್ ಆಫೀಸರುಗಳಿಗೆ ಕಾಲುಭಾಗ ಹೀಗೆ ಯಾರು ಯಾರಿಗೋ ಹೋಗುತ್ತದೆ. ಈ ಕೆಲಸಕ್ಕೆ ಸರಿಯಾದ ಒಂದು ಪ್ಲಾನ್ ಮತ್ತು ಪ್ರೋಗ್ರಾಂ ಇಲ್ಲ. ದಾನ ಕೊಡುವ ರೀತಿಯಲ್ಲಿ ತಮಗೆ ಇಷ್ಟ ಬಂದವರಿಗೆ ಸಹಾಯ ಮಾಡುತ್ತಿದ್ದಾರೆ. ಪ್ರತಿಯೊಂದು ಗ್ರಾಮದಲ್ಲಿಯೂ ಮನೆಗಳನ್ನು ಕಟ್ಟುವುದಕ್ಕೆ ಒಂದು ಪ್ಲಾನ್ ತಯಾರು ಮಾಡಿ, ಮನೆಗಳನ್ನು ಕಟ್ಟತಕ್ಕ ವ್ಯವಸ್ಥೆಯನ್ನು ಇಟ್ಟುಕೊಳ್ಳಬೇಕು. ಇವೊತ್ತಿನ ದಿವಸ ಎಷ್ಟು ಮನೆಗಳನ್ನು ಕಟ್ಟಲು ಸಹಾಯ ಧನವನ್ನು ಕೊಟ್ಟಿದ್ದಾರೆ ಮತ್ತು ಎಷ್ಟು ಮನೆಗಳನ್ನು ಕಟ್ಟಿದ್ದಾರೆ ಎಂದು ನೋಡಿದರೆ ಕಾಲು ಭಾಗದಷ್ಟು ಕೂಡ ಮನೆಗಳಿಲ್ಲವೆಂದು ಹೇಳಬಲ್ಲೆ. ಈ ಬಗ್ಗೆ ಅಂಕಿ ಅಂಶಗಳನ್ನು ನೋಡಿದರೆ ತಮಗೇ ಗೊತ್ತಾಗುತ್ತದೆ.

Tribals ವಿಷಯದಲ್ಲಿ ಒಂದೇ ಒಂದು ವಿಷಯವನ್ನು ಹೇಳಬೇಕಾಗಿದೆ. ನಮ್ಮ ಕಡೆ ಬೂದಿವಡಗ ಎಂದು ಒಂದು ಪಂಗಡವಿದೆ. ಇವರಿಗೆ ಕೆಲವು ಮನೆಗಳನ್ನು ಕಟ್ಟುವುದಕ್ಕೆ ಜಾಗ ಕೊಡಬೇಕೆಂದು ಮೂರು ವರ್ಷಗಳಿಂದಲೂ ಏರ್ಪಾಡು ಮಾಡುತ್ತಿದ್ದಾರೆ. ಅವರಿಗೆ ಬೇಕಾದ ಎತ್ತುಗಳಿಲ್ಲ, ಗಾಡಿ ಇಲ್ಲ, ಯಾವ ಸಹಾಯವನ್ನೂ ಕೊಟ್ಟಿಲ್ಲ. ಅಲ್ಲಿ ಹೋಗಿ ನೋಡಿದರೆ ಅವರ ಚಿಂತಾಜನಕವಾದ ಸ್ಥಿತಿ ಗೊತ್ತಾಗುತ್ತದೆ.

Sri B. RACHIAH (Chamarajanagar).—Are you sure about this, whether they have not been given bullocks etc.

ಶ್ರೀ ಯು. ಎಂ. ಮಾದಪ್ಪ.—ನನಗೆ ತಿಳಿದಿರುವ ಹಾಗೆ ಅವರಿಗೆ ಏನನ್ನೂ ಕೊಟ್ಟಿಲ್ಲ. ಶ್ರೀ ರಾಚಯ್ಯನವರು ಎಲ್ಲಿಂದ ಬಂದಿದ್ದಾರೆಯೋ ನಾನೂ ಅಲ್ಲಿಂದಲೇ ಬಂದಿದ್ದೇನೆ. ಅವರು ಏನು ಮಾಡಿದ್ದಾರೆಂಬುದೂ ನನಗೆ ಗೊತ್ತು. ಅದನ್ನೆಲ್ಲ ಹೇಳಬೇಕಾದ್ದು ಅನಾವಶ್ಯಕ. ನಾನು ನೋಡಿರುವುದರಿಂದ ಈ ಪಂಗಡದವರಿಗೆ ಸಾಕಾದಷ್ಟು ಸಹಾಯವನ್ನು ಕೊಟ್ಟಿಲ್ಲವೆಂದು ಘಂಟಾಘೋಷವಾಗಿ ಹೇಳಬಲ್ಲೆ. ಹರಿಜನರ ಹಾಸ್ಟಲುಗಳ ವಿಷಯದಲ್ಲಿ ಸರಿಯಾದ ವ್ಯವಸ್ಥೆ ಮಾಡಿಲ್ಲ, ಅವರಿಗೆ ಬೇಕಾದ ಪಡಿತರವನ್ನು ಒದಗಿಸಿಲ್ಲ. ಅವರ ಹುಡುಗರಿಗೆ ಬಟ್ಟೆ ವಗೈರೆಗಳನ್ನು ಕೊಡತಕ್ಕ ವ್ಯವಸ್ಥೆ ಇದೆ. ಆದರೆ ಸಾಕಾದಷ್ಟು ಪ್ರಮಾಣದಲ್ಲಿ ಕೊಟ್ಟಿಲ್ಲವೆಂದು ವ್ಯಥೆಯಿಂದ ಹೇಳಬೇಕಾಗಿದೆ. ಈ ವ್ಯವಸ್ಥೆಯನ್ನು ಜಾಗ್ರತೆಯಾಗಿ ಮಾಡಬೇಕೆಂದು

ಸರ್ಕಾರವನ್ನು ಪ್ರಾರ್ಥಿಸಿಕೊಂಡು ಈ ನಿರ್ಣಯವನ್ನು ಅನುಮೋದಿಸುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ (ಬೆಂಗಳೂರು ದಕ್ಷಿಣ—ಅನುಸೂಚಿತ ಜಾತಿಗಳು).—ಅಧ್ಯಕ್ಷರೇ, ನಾನು ಬಹಳ ಸಂತೋಷದಿಂದ ಈ ನಿರ್ಣಯದ ಬಗ್ಗೆ ನಾಲ್ಕು ಮಾತುಗಳನ್ನು ಆಡಬೇಕೆಂದು ನಿಂತಿದ್ದೇನೆ. ಮಾನ್ಯ ಮಿತ್ರರಾದ ಶ್ರೀ ಎಚ್. ರಾಚಯ್ಯನವರು ಈ ನಿರ್ಣಯವನ್ನು ತಂದು ನಮ್ಮೆಲ್ಲರ ಕಣ್ಣನ್ನೂ ತೆರೆಸಿದ್ದಾರೆ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದೆಂದು ನಾನು ಭಾವಿಸುತ್ತೇನೆ.

ಈ ಸಮಸ್ಯೆಯನ್ನು ನಾವು ಯೋಚನೆ ಮಾಡುವಾಗ ನಮ್ಮ ಹಿಂದೂಸ್ಥಾನದ ಸಮಾಜವನ್ನು ಕೂಲಂಕಷವಾಗಿ ವಿಚಾರ ಮಾಡಬೇಕಾಗುತ್ತದೆ. ಈ ಸಮಾಜವನ್ನು ಉದ್ಧಾರ ಮಾಡುವುದಕ್ಕೋಸ್ಕರ ಬಹಳ ಜನ ಮತಬೋಧಕರು ಹುಟ್ಟಿದರು. ಆದರೆ ಹಿಂದಿನಿಂದ ಬಂದಿದ್ದ ಜಾತಿಗಳೆಲ್ಲ ಹಾಗೆಯೇ ಉಳಿದುಕೊಂಡು ಬಂದಿವೆ. ಆದುದರಿಂದ ನಾವು ರಾಜ್ಯಾಂಗವನ್ನು ಜಾರಿಗೆ ತಂದಮೇಲೆ, ನಮ್ಮದು ಜಾತ್ಯತೀತ ರಾಷ್ಟ್ರ, ಜಾತೀಯತೆಯನ್ನು ತೊಡೆದುಹಾಕಿದ್ದೇವೆ ಎಂದು ಈ ಸಮಸ್ಯೆಯಿಂದ ವಿಮುಕ್ತರಾಗತಕ್ಕದ್ದು ಅಷ್ಟು ಒಳ್ಳೆಯದಲ್ಲವೆಂದೆನ್ನಿಸುತ್ತದೆ. ಈ ಸಮಾಜದ ರಚನೆ ಹೇಗಿದೆ ಎನ್ನತಕ್ಕದ್ದನ್ನು ನರ್ದಾರ್ ಫಣಿಕ್ಕರ್ ಅವರ ಮಾತಿನಲ್ಲಿ ಹೇಳಬಯಸುತ್ತೇನೆ. ಅವರು Caste and Democracy ಎನ್ನುವ ಪುಸ್ತಕವನ್ನು ಬರೆದಿದ್ದಾರೆ. ನರ್ದಾರ್ ಫಣಿಕ್ಕರ್ ಅವರು ಪ್ರಾಂತಗಳ ಪುನರ್ವಿಂಗಡಣೆಯ ಸಂಬಂಧದಲ್ಲಿ ಒಬ್ಬ ಮುಖ್ಯ ವ್ಯಕ್ತಿಗಳಾಗಿದ್ದರು. ಅಂಥವರು ಬರೆದಿರುವುದರಲ್ಲಿ ಎರಡು ಮಾತನ್ನು ಹೇಳುತ್ತೇನೆ:

"The first basic principles of caste are the inequality of mankind based on birth, occupation or profession under inequality and the restriction on marriage outside their own group and sub-group. The principles of inequality operated against the vast majority of the population, for it should never be forgotten that the higher castes form only a small minority of the Indian population. The Sudras were denied the right of education and even of liberal occupation while the untouchables who were outside the pale of castes were treated as conquered slaves of community without even ordinary human rights. The Brahmin socialist philosophers responsible for the social structure were fully aware of the dangers which may result from so flagrant a denial of right of the great majority. This condemnation of the majority of the population classified on the basis of caste, placing one above the other was to be justified by the theory of fantastic philosophy and the theory of transmigration. Psychologically, the fact that one is superior to some one is more important to him than that he has others above him."

ಸ್ವಾಮಿ, ನರ್ದಾರ್ ಫಣಿಕ್ಕರ್ ಅವರು ಈ ಜಾತಿಗಳ ವಿಷಯದಲ್ಲಿ ಕೆಲವೇ ಮಾತುಗಳಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ಅದಕ್ಕಿಂತ ಸ್ಪಷ್ಟವಾಗಿ ಹೇಳಲಿಕ್ಕೆ ನನಗೆ ಆಗುವುದಿಲ್ಲವೆಂದು ಹೇಳುತ್ತೇನೆ. ನಮ್ಮ ದೇಶದಲ್ಲಿ ಎಲ್ಲದರಲ್ಲಿಯೂ ಒಗ್ಗಟ್ಟನ್ನು ಸಾಧಿಸಿದ್ದೇವೆ. ಆದರೆ ಹರಿದು ಹಂಚಿ ಹೋಗಿರತಕ್ಕ ಸಮಾಜವನ್ನು ಹನ್ನೊಂದು ವರ್ಷಗಳಾದರೂ ಒಂದು ಮಾಡಿಲ್ಲವಲ್ಲ ಎನ್ನುವುದು ಬಹಳ ಶೋಚನೀಯವಾದುದು. ಇದನ್ನು ಬಹಳ ವ್ಯಸನದಿಂದ ಹೇಳಬೇಕಾಗಿದೆ. ನಮ್ಮ ಸಮಾಜಕ್ಕೆ ಅದೃಷ್ಟ, ನೀತಿ, ದೇವರ ಭಯಗಳು, ಆತ್ಮನ ಜೀವಾನಂತರದ ನಂಬಿಕೆ ಮತ್ತು ಮನುಷ್ಯನ ಸ್ವಾರ್ಥ ಇವುಗಳ ಒಂದು ತಳಪಾಯವಿದೆ. ಇದರ ಫಲವಾಗಿ ಮುಕ್ಕಾಲು ಭಾಗ ಜನತೆಯನ್ನು ನಿರ್ಗತಿಕರನ್ನಾಗಿ ಮಾಡಿ ಕೆಲವೇ ಜನರು ನಿಃಸಂಪತ್ತಿಯಿಂದ ಮೆರೆಯುತ್ತಾರೆ ಎನ್ನುವುದು ತಮಗೆಲ್ಲರಿಗೂ ತಿಳಿದಿರತಕ್ಕ ವಿಷಯ. ಇಂತಹ ಒಂದು ಮೂಢ ನಂಬಿಕೆಯಿಂದ, ರಾಜರುಗಳು, ಜಮೀನುದಾರರುಗಳು, ಬಂಡವಾಳ ಶಾಹಿಗಳು, ಇನ್ನೂ ಕೆಲವರು, ಜನಗಳನ್ನು ನಿರ್ಗತಿಕರನ್ನಾಗಿ ಮಾಡಿದ್ದಾರೆ; ಅನಂತರ ಮತೀಯ ಸಂಸ್ಥೆಗಳು ಮುಂತಾದುವು ಬಂದು ಇವರ ಪ್ರಗತಿಗೆ ಅಡ್ಡ ಬಂದುಬಿಟ್ಟಿದೆ; ಆತಂಕವನ್ನು ಉಂಟುಮಾಡಿವೆ. ನಮ್ಮ ಸಮಾಜದಲ್ಲಿ ಮತೀಯ ಸಂಸ್ಥೆಗಳು, ಜಮೀನುದಾರರು, ಬಂಡವಾಳ ಶಾಹಿಗಳು ಮುಂತಾದ ಶತ್ರುಗಳು ಎಲ್ಲಿಯವರೆಗೆ ಬಲಯುತವಾಗುತ್ತಿರುತ್ತವೆಯೋ, ಅಲ್ಲಿಯವರೆಗೆ ನಮ್ಮ ಸಮಾಜ ಉದ್ಧಾರವಾಗುತ್ತದೆ ಎನ್ನುವ ನಂಬಿಕೆ ನನಗಿಲ್ಲ; ನಮ್ಮ ಸ್ನೇಹಿತರಿಗೂ ನಂಬಿಕೆ ಇರಲಾರದೆಂದು ತಿಳಿಯುವೆ. ಸಮಾಜದಲ್ಲಿ ಕೆಲವು ಜನಗಳು, ಇತರರು ಕಷ್ಟಪಟ್ಟು ಸಂಪಾದನೆ ಮಾಡಿರತಕ್ಕಂಥ ದ್ದನ್ನು ಅನುಭವಿಸಿ ಹೊಚ್ಚೆ ಹೊರೆದುಕೊಳ್ಳುವುದು ಯಾವ ನ್ಯಾಯ? ಜಾತಿ ಎಂಬ ಹೆಸರಿನ ಮೇಲೆ ಇಂಥ ಜನ ಹೊಚ್ಚೆ ಹೊರೆದುಕೊಳ್ಳುವುದು ಅಧರ್ಮ. ನಾವು ಸ್ವಾತಂತ್ರ್ಯಗಳಿಸಿ ಹನ್ನೊಂದು ವರ್ಷಗಳಾದುವು, ಆದರೂ ನಾವೇನಾದರೂ ಪ್ರಗತಿಶೀಲ ಮನೋಭಾವನೆಯಿಂದ ಕೆಲಸಮಾಡಿದ್ದೇವೆಯೇ? ರಾಜ್ಯಾಂಗದಲ್ಲಿ ಡೈರೆಕ್ಟಿವ್ ಪ್ರಿನ್ಸಿಪಲ್ಸ್ ಇಟ್ಟುಕೊಂಡಿದ್ದೇವೆ. ಇವುಗಳ ಪ್ರಕಾರ ಎಷ್ಟೋ ಕೆಲಸ ಮಾಡಬೇಕು. ವ್ಯವಸಾಯದ ಕೆಲಸಗಾರರ, ವ್ಯವಸಾಯಗಾರರ ಮತ್ತು ಕಾರ್ಖಾನೆಯ ಕೆಲಸಗಾರರ ಜೀವನ ಮಟ್ಟ (standard of living) ಹೆಚ್ಚಬೇಕು. ಅವರನ್ನು ಉದ್ಧಾರಮಾಡಬೇಕು. ಅವರ ಜೀವನವನ್ನು ಉತ್ತಮಪಡಿಸಬೇಕೆಂದು ಡೈರೆಕ್ಟಿವ್ ಪ್ರಿನ್ಸಿಪಲ್ಸ್‌ನಲ್ಲಿದೆ. ಕಾರ್ಖಾನೆಗಳಲ್ಲಿ ಕೆಲಸಮಾಡತಕ್ಕಂಥವರನ್ನು ಉದ್ಧಾರ ಮಾಡಬೇಕು; ಅವರನ್ನು ಮುಂದಕ್ಕೆ ತರಬೇಕು. ಇಲ್ಲದೆ ಹೋದರೆ ಡೈರೆಕ್ಟಿವ್ ಪ್ರಿನ್ಸಿಪಲ್ಸ್‌ನಲ್ಲಿರುವ ಆದೇಶವನ್ನು ಅಲ್ಲಗಳೆದಂತಾಗುತ್ತದೆ. ಸರ್ಕಾರದಲ್ಲಿ ಏರ್ಪಟ್ಟಿರುವ ಕ್ರಮ, ನಡೆಯುವ ಕೆಲಸ ಕಾರ್ಯಗಳನ್ನು ನೋಡಿದರೆ ನಮ್ಮಲ್ಲಿ, ಸದನ್ಯರಲ್ಲಿ ನಿರಾಶಾಭಾವನೆ ಪ್ರಾರಂಭವಾಗಿದೆ.

ಆರ್ಟಿಕಲ್ 17ರ ಪ್ರಕಾರ ಅಸ್ಪೃಶ್ಯತೆಯನ್ನು ತೆಗೆದುಹಾಕಿದರು. ಅದನ್ನು ನಡೆಸಿಕೊಂಡು ಬಂದರೆ

(ಶ್ರೀ ಬಿ. ಬನವಲಂಗಪ್ಪ)

ಶಿಕ್ಷೆಗೆ ಗುರಿಯಾಗುತ್ತಾರೆ ಎಂದು ಘೋಷಿಸಿದರು. ಆದರೆ ಅಸ್ಪೃಶ್ಯತೆ ಮನೆ ಮನೆಯಲ್ಲಿಯೂ ಇದೆ. ಒಬ್ಬ ವಿದ್ಯಾವಂತ ಅಸ್ಪೃಶ್ಯ ಹಳ್ಳಿಗೆ ಹೋದರೂ ಅಸ್ಪೃಶ್ಯತೆ ಅವನ ಮುಖಕ್ಕೆ ಬಂದು ಹೊಡೆಯುತ್ತದೆ. ವಿದ್ಯಾವಂತರು ಹಳ್ಳಿಗೆ ಹೋದಾಗ ಹೀಗಾದರೆ, ಅವಿದ್ಯಾವಂತ ಬಡ ಜನಗಳ ಕಷ್ಟವನ್ನು ಹೇಳಲಿಕ್ಕೆ, ವರ್ಣಿಸಲಿಕ್ಕೆ ಶಕ್ಯವಿಲ್ಲ. ಪಾರ್ಲಮೆಂಟು "Removal of Untouchability Act, 1955" ಪಾಸು ಮಾಡಿದ್ದಾರೆ ಮತ್ತು ಅದು ಜಾರಿಯಲ್ಲಿದೆ. ಅದರಲ್ಲಿ ಅಸ್ಪೃಶ್ಯತೆಯು ಅಪರಾಧ ಎಂದು ಘೋಷಿಸಿದ್ದಾರೆ. ಆದರೆ ಯಾವ ಪೋಲೀಸ್ ಸ್ಟೇಷನ್ನಿನಲ್ಲಿಯೂ ಆ ಆಕ್ಟಿನ ಒಂದು ಕಾಪಿಯನ್ನೂ ಇಟ್ಟಿರುವುದಿಲ್ಲ. ಕಾನೂನನ್ನು ಹೇಗೆ ಜಾರಿ ಮಾಡಬೇಕೆಂಬುದು ಅಧಿಕಾರಿಗಳಿಗೆ ಗೊತ್ತಿಲ್ಲ. ಹೀಗೆ ಕಣ್ಣು ಮುಚ್ಚಿಕೊಂಡು ಕೆಲಸ ಮಾಡಿದರೆ ಯಾವ ಕೆಲಸವೂ ಆಗುವುದಿಲ್ಲ. ವಿವೇಕಾನಂದರು ಹೇಳುತ್ತಾರೆ: Hungry stomach knows no religion. ನೀವು ಕಾನೂನು ಮಾಡಿ ಅಸ್ಪೃಶ್ಯತೆ ನಿವಾರಣೆಯಾಯಿತು ಎನ್ನುವುದು ಸರಿಯಲ್ಲ. ಕಾನೂನನ್ನು ಜಾರಿ ಮಾಡಬೇಕಾಗುತ್ತದೆ. ಕಾನೂನನ್ನು ಮಾಡುವುದರಿಂದ ಅಸ್ಪೃಶ್ಯರಿಗೆ ಹೊಟ್ಟೆ ತುಂಬಿಕೊಳ್ಳಲಿಕ್ಕೆ ಗೌರವಯುತವಾಗಿ ಜೀವನ ಮಾಡಿಕೊಳ್ಳಲಿಕ್ಕೆ ಮಾರ್ಗ ಕಲ್ಪಿಸಿಕೊಟ್ಟಹಾಗಾಗಲಿಲ್ಲ. ಕಾನೂನೇ ರಕ್ಷಣೆ ಕೊಡುವುದಿಲ್ಲ. ಜನಗಳೆಲ್ಲರೂ ವಿದ್ಯಾವಂತರಾಗುತ್ತಿದ್ದಾರೆ. ಕಾಂಗ್ರೆಸ್ ಸರ್ಕಾರ ಬರುವುದಕ್ಕೆ ಮುಂಚೆ ಅಸ್ಪೃಶ್ಯರ ಅಭಿವೃದ್ಧಿಗೆ ಎಷ್ಟೋ ಕೆಲಸ ಕಾರ್ಯಗಳಾಗಿವೆ. ಗೋಪಾಲಸ್ವಾಮಿ ಐಯ್ಯರ್, ಕಂಠೀರವ ನರಸಿಂಹರಾಜ ಒಡೆಯರ್, ಸಿ.ಆರ್. ರೆಡ್ಡಿ ಮುಂತಾದ ಮಹನೀಯರು ಇವರಿಗೆ ವಿದ್ಯಾ ಸಂಸ್ಥೆಗಳನ್ನು ತೆರೆದಿದ್ದಾರೆ. ಈ ಸಂಸ್ಥೆಗಳಿಂದ ಎಷ್ಟೋ ಜನ ವಿದ್ಯಾವಂತರಾಗಿದ್ದಾರೆ. ವಿದ್ಯೆ ನಮ್ಮಲ್ಲಿ ಹರಡುತ್ತಾ ಇದೆ; ಚೇತನರಾಗುತ್ತಾ ಇದ್ದೇವೆ. ನಮ್ಮ ಕಷ್ಟಗಳೇನು ಎನ್ನುವುದನ್ನು ಅರಿತುಕೊಳ್ಳುತ್ತಿದ್ದೇವೆ. ನಮ್ಮ ಹಕ್ಕುಬಾಧ್ಯತೆಗಳನ್ನು ಅರಿತುಕೊಳ್ಳುತ್ತಿದ್ದೇವೆ. ಶತಮಾನಗಳಿಂದ ಈ ಅಸ್ಪೃಶ್ಯತೆಯನ್ನು ಇಟ್ಟುಕೊಂಡು ಬಂದಿದ್ದೇವೆ, ಹಾಗೆಯೇ ಇನ್ನೂ ಇದನ್ನು ಇಟ್ಟುಕೊಂಡು ತಳ್ಳಿಕೊಂಡು ಬರಬಹುದು ಎಂಬ ಮನೋಭಾವನೆ ಯಾರಲ್ಲಾದರೂ ಇದರೆ ಅದು ಅಪಾಯಕರ. ಅದನ್ನು ತೊಡೆದು ಹಾಕಬೇಕು. ಮನುಷ್ಯನಿಗೆ ಚೇತನ ಬಂದರೆ ಒಂದು ಕ್ರಾಂತಿಯಾಗುತ್ತದೆ. ಸಮಾಜದಲ್ಲಿ ಯಾವ ಕಾಲದಲ್ಲಿ, ಯಾವ ರೂಪದಲ್ಲಿ ಅದು ಪರಿಣಾಮಕಾರಿಯಾಗುತ್ತದೆ ಎಂದು ಹೇಳಲಿಕ್ಕೆ ಸಾಧ್ಯವಿಲ್ಲ. ಇಂಗ್ಲೀಷರು ಮುಸಲ್ಮಾನರಿಂದ ರಾಜ್ಯ ತೆಗೆದುಕೊಂಡಾಗ, ಮುಸಲ್ಮಾನರು ಯಾರೂ ವಿದ್ಯೆ ಕಲಿಯಬಾರದೆಂದು ಆರ್ಡರ್ ಜಾರಿ ಮಾಡಿದರು. ಇದರಲ್ಲಿ ಅವರ ಉದ್ದೇಶವೇನೆಂದರೆ, ಮುಸಲ್ಮಾನರು ತಮ್ಮ ಹಕ್ಕು ಭಾದ್ಯತೆಗಳನ್ನು ತಿಳಿದುಕೊಳ್ಳಬಾರದೆಂದು. ಆದರೆ ಮುಸಲ್ಮಾನರು ವಿದ್ಯಾಭ್ಯಾಸ ಮಾಡಿದರು, ಚೇತನಗೊಂಡರು; ಮುಂದೆ ಬಂದರು. ಆ ಇಂಗ್ಲೀಷರನ್ನು ನಾವು ಹಿಂದೂಸ್ಥಾನದಿಂದ ಓಡಿಸಿ ಸ್ವತಂತ್ರರಾಗಿದ್ದೇವೆ. ಅದೇ ರೀತಿಯಲ್ಲಿ ನೀವೂ ತಿಳಿದುಕೊಂಡಿರಬಹುದು. ನಿಮ್ಮ ವರ್ಗದವರಿಗೆ ವಿದ್ಯಾಭ್ಯಾಸ ಕೊಟ್ಟರೆ, ಅವರು ಮುಂದಕ್ಕೆ ಬರುತ್ತಾರೆ. ಅವರನ್ನು ಈ ಸ್ಥಿತಿಯಲ್ಲಿಯೇ ಇಟ್ಟಿರಬೇಕು ಎಂದರೆ, ಇದು ಬಹಳ ಅಪಾಯಕರ. ಕರ್ನಾಟಕದಲ್ಲೆಲ್ಲಾ ಇವರಿಗೆ ವಿದ್ಯಾರ್ಥಿನಿಲಯಗಳನ್ನು ಸ್ಥಾಪನೆ ಮಾಡಿ, ಇವರ ವಿದ್ಯಾಭ್ಯಾಸಕ್ಕೆ ಉತ್ತೇಜನ ಕೊಡಿ ಎಂದು ಅಂಗಲಾಚಿ ಬೇಡಿಕೊಂಡರೂ ಕೂಡ, ವಿದ್ಯಾಮಂತ್ರಿಗಳು ಜನರಲ್ ಹಾಸ್ಟಲುಗಳನ್ನು ಮಾಡುತ್ತೇವೆಂದು ಹೇಳುತ್ತಾರೆ. ನಮ್ಮ ಸ್ನೇಹಿತರಾದ ಶ್ರೀ ಆರ್. ಚೆನ್ನಿಗರಾಮಯ್ಯನವರಿಗೆ ಹೇಳಿದೆ. ನಿಮ್ಮ ಮಂತ್ರಿತ್ವದ ಅವಧಿಯ ಕಾಲದಲ್ಲಿ ಒಂದೊಂದು ಡಿಸ್ಟ್ರಿಕ್ಟಿಗೆ ಒಂದೊಂದು ಹಾಸ್ಟಲುಮಾಡಿ, ನಿಮ್ಮ ವರ್ಗದವರು ವಿದ್ಯಾವಂತರಾಗಲಿ, ಚೇತನಗೊಳ್ಳಲಿ, ಗೌರವಯುತರಾಗಿ ಬಾಳುವ ಅವಕಾಶ ಕಲ್ಪಿಸಿಕೊಳ್ಳಲಿ ಎಂದು. ಇವತ್ತಿನವರೆಗೆ ಇವರಿಗೆ ಅವರ ವಿಚಾರದಲ್ಲಿ ಕರುಣೆ ಬರಲಿಲ್ಲ. ನಮ್ಮ ಶ್ರೀ ರಾಚಯ್ಯನವರು ಹೇಳಿದ ಹಾಗೆ ನನಗೂ ಅನ್ನಿಸುತ್ತದೆ. ಅವರಿಗೆ ಏಕೆ ಮನಸ್ಸು ಬರಲಿಲ್ಲ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. ನಮ್ಮೆಲ್ಲರ ಬೆಂಬಲ ಅವರಿಗೆ ಇದೆಯೋ ಇಲ್ಲವೋ ಎನ್ನುವ ಶಂಕೆ ಅವರಿಗೆ ಇದ್ದಹಾಗೆ ಕಾಣುತ್ತದೆ. ನಾನು ಹೇಳುತ್ತೇನೆ. ನಮ್ಮ ಬೆಂಬಲ ಅವರಿಗಿದೆ. ನಮ್ಮ ಬೆಂಬಲ ಇದ್ದರೇ ಅವರು ಶಕ್ತಿಯುತರಾಗುತ್ತಾರೆ. ನಾವು ಬಲಯುತವಾದ ಜನಾಂಗ ಎನ್ನುವುದನ್ನು ಅವರು ಮರೆಯಬಾರದು. ನಾವು ಹೊಟ್ಟೆ ಹೊರೆದುಕೊಳ್ಳುವುದಕ್ಕೆ ಬಂದಿಲ್ಲ; ಶಕ್ತಿಯುತರಾಗುವುದಕ್ಕೆ ಬಂದಿದ್ದೇವೆ. ಇಲ್ಲಿ ಮಂತ್ರಿಗಳಾಗಿ ಬಂದು ನಿಜವಾಗಿಯೂ ನಮ್ಮ ಜನಾಂಗವನ್ನು ಉದ್ಧಾರ ಮಾಡಬೇಕು. ನಮ್ಮ ಜನಾಂಗವನ್ನು ಬೇರೆ ಗೌರವಯುತ ಜನಾಂಗದ ಮಟ್ಟಕ್ಕೆ ತರಬೇಕೆಂಬ ಒಂದು ಛಲದಿಂದ ಕೆಲಸಮಾಡಿ ಕಂಕಣಬದ್ಧರಾಗಿ ನಿಲ್ಲಲಿ. ಇಲ್ಲಿ ಎಲ್ಲರೂ ಮಂತ್ರಿಗಳಾಗಬೇಕೆಂದು ಬಂದಿಲ್ಲ. ಹೊಟ್ಟೆ ಹೊರೆದುಕೊಳ್ಳಲು ಯಾರೂ ಇಲ್ಲಿ ಬಂದಿರುವುದಿಲ್ಲ; ಜನರ ಸೇವೆ ಮಾಡಲಿಕ್ಕೆ ಬಂದಿದ್ದೇವೆ. ಹರಿಜನ ಹಾಸ್ಟಲುಗಳನ್ನು ಮಾಡಿ. ನಮ್ಮ ಷೆಡ್ಯೂಲ್ಡ್ ಕ್ಯಾಸ್ಟ್ ಹೆಣ್ಣು ಮಕ್ಕಳ ವಿಚಾರ ಮಾತನಾಡಬೇಕು. ಅವರು ಏನೂ ವಿದ್ಯೆ ಇಲ್ಲದೆ, ಸಂಪಾದನೆ ಇಲ್ಲದೆ ನರಳುತ್ತಿದ್ದಾರೆ. ಅಂಥವರಿಗೆ ಯಾವ ಅನುಕೂಲವನ್ನೂ ಮಾಡಿಲ್ಲ. ಹೆಣ್ಣು ಮಕ್ಕಳ ವಿಷಯದಲ್ಲಿ ಒಂದು ಮಾತನ್ನು ಬಹಳ ನಂಕಟದಿಂದ ಹೇಳಬೇಕಾಗಿದೆ. ಬಡವರ ಮಕ್ಕಳಿಗೆ ಸ್ಕೂಲಿಗೆ ಹೋಗುವ ಅವಕಾಶ ಇಲ್ಲದೆ ಹೋಗಿ, ಅವರು ಬೀದಿ ಭಿಕಾರಿಗಳ ಹಾಗೆ ಅಲೆಯುವ ಕರುಣಾಜನಕ ದೃಶ್ಯವನ್ನು ನೋಡಬೇಕಾಗಿದೆ. ಹೆಣ್ಣುಮಕ್ಕಳಿಗೆ ಉಟ್ಟ ಒಂದು ಸೀರೆ ಬಿಟ್ಟು ಇನ್ನೊಂದು ಸೀರೆ ಇಲ್ಲ. ಉಟ್ಟುಕೊಂಡು ಇನ್ನರ್ಧ ಒಗೆದುಕೊಂಡು, ಒಣಗಿಸಿಬಿಟ್ಟು, ಪುನಃ ಇನ್ನರ್ಧ ಒಗೆದು, ಒಣಗಿಸಿ ಉಟ್ಟುಕೊಂಡದ್ದನ್ನು ಕಣ್ಣಾರೆ ನೋಡಿದ್ದೇನೆ. ಅವರ ಸಂಕಟ, ಕಷ್ಟವನ್ನು ದೇವರೇ ನಿವಾರಣೆ ಮಾಡಬೇಕು.

2-30 P.M.

ನಾವು ಅವರ ವಿಚಾರದಲ್ಲಿ ಏನು ಕೆಲಸ ಮಾಡಿದ್ದೇವೆಂದು ಯೋಚನೆ ಮಾಡಬೇಕು. ಕೆಲಸ ಮಾಡಲು ಮುಂದೆ ಬಂದರೂ ಅವಕಾಶವಿಲ್ಲ. ಸಾಹುಕಾರರನ್ನು ಇನ್ನೂ ಸಾಹುಕಾರರನ್ನಾಗಿ ಮಾಡಬೇಕೆಂದು ಸರ್ಕಾರದ ಇಷ್ಟವೆ? ಐದು ವರ್ಷದ ಯೋಜನೆಯನ್ನು ತೆಗೆದುಕೊಂಡರೂ ಕೂಡ ನೇರವಾಗಿ ಬಡವರಿಗೆ ಸಹಾಯವಾಗುತ್ತಿಲ್ಲ. ಬಡವರೂ ಮುಗ್ಧರೂ ಅವಿದ್ಯಾವಂತರೂ ಯುಗಾಂತರಗಳಿಂದ ವಿದ್ಯೆ ಇಲ್ಲದೇಯಿರುವವರೂ ಆದ ಜನಾಂಗದವರನ್ನು ಮೊದಲು ಮುಂದೆ ತರಬೇಕು. ಈ ಜನಾಂಗ ಮುಂದೆ ಬಂದು ಒಂದು ಮಟ್ಟಕ್ಕೆ ಬರುವವರೆಗೂ ಈಗಾಗಲೇ ಮುಂದೆ ಬಂದಿರುವ ಜನರನ್ನು ಹಿಡಿದಿಟ್ಟು ಅವರು ಮುಂದೆ ಬಂದಮೇಲೆ ಎಲ್ಲರಿಗೂ ಸಮಾನ ಅವಕಾಶ ದೊರೆಯುವ ಹಾಗೆ ಮಾಡಿದರೆ

ದೇಶಕ್ಕೆ ಒಳ್ಳೆಯದು. ಪ್ರಜಾರಾಜ್ಯದಲ್ಲಿ ಪ್ರತಿಯೊಬ್ಬರೂ ಸಮಾನವೆಂದು ನಾವು ಏನು ಹೇಳುತ್ತಿದ್ದೇವೋ ಅಂಥ ಸಮಾನತೆ ಇಲ್ಲ. ನಮ್ಮ ಸಮಾಜದಲ್ಲಿ ಜಾತಿ ಭೇದ ಗಳಿರುವವರೆಗೂ ಇದು ಸಾಧ್ಯವಾಗುವುದಿಲ್ಲ. ಮೊದಲು ಸರ್ಕಾರದವರು ಪ್ರಯತ್ನಪಟ್ಟು ಹಿಂದುಳಿದಿರುವವರನ್ನು ಮುಂದೆ ತಂದು ಸಮಾನಸ್ಥಿತಿಯನ್ನು ತಂದು ನಾವೆಲ್ಲರೂ ಒಂದೇ ಮಟ್ಟಕ್ಕೆ ಬರುವ ಹಾಗೆ ಮಾಡದಿದ್ದರೆ ಪ್ರಜಾರಾಜ್ಯ ಅಣಕು ರಾಜ್ಯವಾಗುತ್ತದೆ. ಇದನ್ನೆಲ್ಲಾ ಪರಿಶೀಲಿಸಲು ಒಂದು ಸಮಿತಿಯನ್ನು ಸರ್ಕಾರದವರು ನೇಮಕಮಾಡಬೇಕು. ಒಂದು 'ಸ್ಕೆಡೇಷ್ಟ್' ಮಾಡ ಬೇಕು. ಇದರಲ್ಲಿ ಮೂರು ಭಾಗ ಮಾಡಬೇಕು. ಸಾಮಾಜಿಕವಾಗಿ, ವಿದ್ಯೆಯಲ್ಲಿ ಮತ್ತು ಐಶ್ವರ್ಯದಲ್ಲಿ ಮುಂದುವರಿದವರು, ಮತದಿಂದ ಪುರಸ್ಕಾರವಿದ್ದರೂ ಅವರಲ್ಲಿ ಬಡತನದಲ್ಲಿರುವವರು ಮತ್ತು ಸಾಮಾ ಜಿಕ, ವಿದ್ಯೆ, ಐಶ್ವರ್ಯ ಎಲ್ಲದರಲ್ಲಿಯೂ ಹಿಂದುಳಿದಿರುವ ವರು ಎಂಬುದಾಗಿ ವಿಭಾಗ ಮಾಡಬೇಕು. ಹೀಗೆ ಎಲ್ಲದರಲ್ಲಿಯೂ ಹಿಂದಿರುವವರಿಗೆ ವಿಶೇಷ ಸೌಲಭ್ಯ ಕೊಟ್ಟು ಸಹಾಯ ಮಾಡಬೇಕು. ಸರ್ಕಾರದವರು ರಾಜ್ಯಾಂಗದ ಆದರ್ಶದ ರೀತಿ ಸಮತೆಯನ್ನು ತರಲು ನೆರವಾಗುತ್ತಾರೆಂದು ನಂಬಿ ನನ್ನ ಮಾತನ್ನು ಮುಗಿ ಸುತ್ತೇನೆ.

*ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ (ತಿಪಟೂರು).— ಅಧ್ಯಕ್ಷರೇ, ಅಧಿಕಾರ ಪಕ್ಷದ ಮಾನ್ಯ ಸದಸ್ಯರು ತಂದಿ ರುವ ಈ ನಿರ್ಣಯವನ್ನು ನಾನು ಹೃತ್ಪೂರ್ವಕವಾಗಿ ಅನುಮೋದಿಸುತ್ತೇನೆ. ಇದು ಬಹಳ ಒಳ್ಳೆಯ ನಿರ್ಣಯ. ಅಧಿಕಾರ ಪಕ್ಷದಲ್ಲಿರುವ ಸದಸ್ಯರಿಗೆ ಇಂಥ ನಿರ್ಣಯ ವನ್ನು ತರುವ ಒಳ್ಳೆಯ ಬುದ್ಧಿಯನ್ನು ದೇವರು ಕೊಟ್ಟ ದ್ದಕ್ಕಾಗಿ ಸಂತೋಷಪಡುತ್ತೇನೆ. ನುಡಿಯಂತೆ ನಡೆಯ ಬೇಕು. ಬರಿಯ ತೋರಿಕೆಗಾಗಿ, ಜನರ ಪ್ರೀತಿಯನ್ನು ಸಂಪಾದನೆ ಮಾಡುವುದಕ್ಕಾಗಿ ಇದನ್ನು ತಂದಿದ್ದಾ ರೆಂದು ನಾನು ತಿಳಿದುಕೊಂಡಿಲ್ಲ. ಖಂಡಿತವಾಗಿಯೂ ಶ್ರೀ ರಾಚಯ್ಯನವರು ಈ ನಿರ್ಣಯವನ್ನು ವಾಪಸು ತೆಗೆದುಕೊಳ್ಳುವುದಿಲ್ಲವೆಂದು ತಿಳಿದುಕೊಂಡಿದ್ದೇನೆ.

ಜಾತಿಯ ಆಧಾರದ ಮೇಲೆ ಆದಿಕರ್ನಾಟಕರ ಬಾವಿ, ಇಂಥ ಕೋಮಿನವರ ಬಾವಿ, ಅಂಥ ಕೋಮಿನವರ ಬಾವಿ, ಎಂದು ಒಂದೊಂದು ಗ್ರಾಮದಲ್ಲಿಯೂ ನಾಲ್ಕು ಬಾವಿಗಳನ್ನು ಮಾಡಿದ್ದಾರೆ. ಇದೇ ಹಣವನ್ನು ಬೇರೆ ಅಭಿವೃದ್ಧಿ ಕೆಲಸಗಳಿಗೆ ಉಪಯೋಗಿಸಬಹುದಾಗಿತ್ತು. Weaker sections, ಎಂದರೆ, ಆದಿಕರ್ನಾಟಕ, ಆದಿದ್ರಾವಿಡ ಮುಂತಾದವರಲ್ಲಿ ಯಾರೋ ಒಬ್ಬರು ಮಂತ್ರಿಯಾದ ಮಾತ್ರಕ್ಕೇ ಆ ಕೋಮಿನ ಮಿಕ್ಕ ಜನ ರೆಲ್ಲರೂ ಬಡವರಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ಎಲ್ಲ ಪಂಗಡಗಳಲ್ಲಿಯೂ ಹೀಗೆಯೇ ಇದೆ. ಬಡವರೂ ಇದ್ದಾರೆ, ಶ್ರೀಮಂತರೂ ಇದ್ದಾರೆ. ಒಬ್ಬ ಅಧಿಕಾರಕ್ಕೆ ಬಂದಾಗ ಅಥವಾ ಮಂತ್ರಿಯಾದಾಗ ದೂರದ ಸಂಬಂಧಿ ಗಳೂ ಹತ್ತಿರ ಬರುತ್ತಾರೆ. ಈಗ ಮಂತ್ರಿಗಳಿಗೆ ಈ ಅನುಭವವಾಗಿದೆ. ಮಂತ್ರಿಗಳೂ ಸದಸ್ಯರೂ ನೋಡಿ ದ್ದಾರೆ. ಒಂದು ದಿನ ರ್ ಪಾರ್ಟಿ ಆದರೆ ಬಟ್ಟೆ ಮಾಸಿ ರುವವನು ಯಾರಾದರೂ ಬಂದರೆ ಅವನನ್ನು ಯಾರೂ ಮಾತನಾಡಿನದೆ ದೂರ ಇರಿಸುತ್ತಾರೆ, ಅನುಕೂಲಸ್ಥ ಬಂದರೆ ಅವನನ್ನು ಯಾವ ಜಾತಿ ಎಂದು ವಿಚಾರಿಸದೆ ಹತ್ತಿರ ಕೂಡಿಸಿಕೊಳ್ಳುತ್ತಾರೆ. ಬಡವರ ದರಿದ್ರ ಕಡಮೆಯಾದರೆ ವಿದ್ಯೆಯಲ್ಲಿ ಉನ್ನತ ಮಟ್ಟಕ್ಕೆ ಬರು ವುದು ಸಾಧ್ಯವಾಗುತ್ತದೆ. ಜಾತೀಯ ಭಾವನೆ ಎಲ್ಲ ದರಲ್ಲಿಯೂ ಇದೆ. ಬಾಯಲ್ಲಿ ಮಾತ್ರ ಇದು ಇರ ಬಾರದೆಂದು ಹೇಳುತ್ತೇವೆ. ಮುಂದಾದರೂ ತೀರ ಬಡವರು ಯಾರೆಂಬ ಬಗ್ಗೆ ಒಂದು ಪಟ್ಟಿಯನ್ನು ತಯಾ ರುಮಾಡಿ ಅವರ ಪುರೋಭಿವೃದ್ಧಿಗೆ ಏನೇನು ಕಾರ್ಯ ಕ್ರಮ ಕೈಗೊಳ್ಳಬೇಕೆಂಬುದನ್ನು ಯೋಚನೆ ಮಾಡ ಬೇಕು. ಯಾವ ಯಾವ ಜನಾಂಗದಲ್ಲಿ ಶ್ರೀಮಂತರ ಸಂಖ್ಯೆ ಎಷ್ಟು, ಬಡವರ ಸಂಖ್ಯೆ ಎಷ್ಟು ಎಂಬುದನ್ನು ಗೊತ್ತುಮಾಡಿ, ಬಡವರು ಮುಂದೆ ಬರುವುದಕ್ಕೇನು ಮಾಡಬೇಕು, ಅವರ ಪುರೋಭಿವೃದ್ಧಿಗೆ ಯಾವ ಯಾವ ಕೈಗಾರಿಕೆ ಅಗತ್ಯ ಎಂಬುದನ್ನು ವಿಚಾರ ಮಾಡಿ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುವುದು ಒಳ್ಳೆಯದು. Socialistic Pattern ಮಾಡುವುದಕ್ಕೆ ಬದಲು Socialism ಮಾಡಿದರೆ ಒಳ್ಳೆಯದು. ಕುಂಬಳಕಾಯಿ ಮಾದರಿಯಿಂದ ಅಡಿಗೆ ಮಾಡಿ ಊಟಮಾಡುವುದಕ್ಕಾಗು ವುದಿಲ್ಲ. ಆದರೆ ಕುಂಬಳಕಾಯನ್ನು ಅಡಿಗೆಮಾಡಿ ತಿನ್ನ ಬಹುದು. ಬಡವರು ಮುಂದುವರಿದು ಮಂತ್ರಿಗಳಾ ದರೆ ತಮಗೆ ಅವಕಾಶ ಸಿಕ್ಕುತ್ತದೆಯೋ ಇಲ್ಲವೋ ಎಂಬ ಹೆದರಿಕೆ ಕೆಲವರಿಗಿದೆಯೋ ಏನೋ! ಎಲ್ಲರೂ ಮಂತ್ರಿಯಾಗುವುದಕ್ಕಾಗುವುದಿಲ್ಲ. ಆದುದರಿಂದ ಬಡ ವರ ಹೊಟ್ಟೆಯಪಾಡಿಗೆ ಅನುಕೂಲ ಮಾಡಿದರೆ ಒಳ್ಳೆ ಯದು. ಇದಕ್ಕೆ ಯಾವ ಕೈಗಾರಿಕೆಗಳನ್ನು ಏರ್ಪಾಡು ಮಾಡುವುದು ಎಂಬುದನ್ನು ಯೋಚಿಸಿ ಮರಗೆಲಸ, ಬಟ್ಟೆ ನೇಯುವ ಕೆಲಸ ಮುಂತಾದುವುಗಳಲ್ಲಿ ಶಿಕ್ಷಣ ಕೊಡುವುದಕ್ಕೆ ಏರ್ಪಾಡು ಮಾಡುವುದಲ್ಲದೆ ಬಡವರ ಜೀವನೋಪಾಯಕ್ಕೆ ಅವಕಾಶಮಾಡಬೇಕು. ಈಗ ಖಾದಿ ಬೋರ್ಡ್ ಎಂದು ಮಾಡಿದ್ದಾರೆ. ಅದರಲ್ಲಿ ಸದಸ್ಯರಾಗಿ ಶ್ರೀಮಂತರನ್ನೇ ಸೇರಿಸಿದ್ದಾರೆ. ಅವರಿಗೆ ಬಡವರ ಕೆಲಸದ ವಿಷಯವೇನು ಗೊತ್ತು? ಅವರು ಬ್ಯಾಂಕುಗಳಲ್ಲಿ ಹಣ ಹಾಕಿರುವುದನ್ನು ನೋಡಿದರೆ ಅವರು ಶ್ರೀಮಂತರೆಂಬುದು ಗೊತ್ತಾಗುತ್ತದೆ. ಅವ ರಿಂದ ಇಂಥ ಯಾವ ಕಾರ್ಯವೂ ಆಗುವುದಿಲ್ಲ. ಹೀಗೆ ಶ್ರೀಮಂತರನ್ನು ಇಂಥ ಕೆಲಸಗಳಿಗೆ ಹಾಕಿದರೆ ಹೇಗೆ? ಅಂಬಾರಿ ಮೇಲೆ, ಏರೋಪ್ಲೇನ್ ಮೇಲೆ ತಿರು ಗಾಡುವವರಿಗೆ ಎತ್ತಿನ ಗಾಡಿಯಲ್ಲಿ ತಿರುಗುವವರ ಕಷ್ಟ ಗೊತ್ತಾಗುವುದಿಲ್ಲ. ಬಡವರು ನಿಜವಾಗಿಯೂ ಎಲ್ಲ ಜಾತಿಯಲ್ಲಿಯೂ ಇದ್ದಾರೆಂಬುದು ನನಗೆ ಗೊತ್ತಿದೆ. ಆದರೆ ಕೇಂದ್ರ ಸರ್ಕಾರದವರು ಕೆಲವು ಜಾತಿಯವರನ್ನು ಹಿಂದುಳಿದವರೆಂದು ನಿಗದಿ ಮಾಡಿ ದ್ದಾರೆ. ಷೆಡ್ಯೂಲ್ಡ್ ಕ್ಲಾಸ್ ಎಂದು ಕೆಲವು ಜಾತಿಯ ವರನ್ನು ಸೇರಿಸಿದ್ದಾರೆ. ಕಾಡು ಗೊಲ್ಲರು ಎಲ್ಲರಿ ಗಿಂತಲೂ ಹಿಂದುಳಿದಿದ್ದಾರೆ. ಒಂದು ವೇಳೆ ಈ ನಿರ್ಣಯ ಈಗ ಅಂಗೀಕಾರವಾಗದೆ ಹೋದರೂ ಈ ಜಾತಿಯನ್ನು ಡಿಪ್ರೆಸ್ಡ್ ಕ್ಲಾಸ್ ಅಥವ ಷೆಡ್ಯೂಲ್ಡ್ ಕ್ಲಾಸಿಗೆ ಸೇರಿಸಿ ಇವರಿಗೆ ಎಲ್ಲ ಸೌಲಭ್ಯಗಳನ್ನೂ ಕೊಡ ಬೇಕು. ಈ ಶಾಖೆಗೆ ಯಾರಾದರೂ ಮಂತ್ರಿಗಳಾಗಿರಲಿ, ಹಿಂದೆ ಚನ್ನಯ್ಯನವರಿದ್ದರು, ಈಗ ಚೆನ್ನಿಗರಾಮಯ್ಯ ನವರಿದ್ದಾರೆ, ನಾಳೆ ಬೇರೆಯವರು ಬರುತ್ತಾರೆ. ಈ ಕೆಲಸವಂತೂ ಆಗಬೇಕು. ಹಿಂದುಳಿದವರಿಗೆಂದು ಮಾಡುವುದು ದುರುಪಯೋಗವಾಗಬಾರದು. ತಿಪ ಟೂರಿನಲ್ಲಿ ಹರಿಜನರಿಗೊಂದು ಸ್ಪೆಷಲ್ ಗ್ರಾಂಟ್ ಕೊಟ್ಟಿದ್ದಾರೆ. ಅದು ಯಾರೋ ಒಬ್ಬರಿಗೆ ಅನುಕೂಲ ವಾಗುತ್ತಿದೆ. ಹೀಗೆ ಸ್ಪೆಷಲ್ ಗ್ರಾಂಟೆಂದು ಒಬ್ಬರಿಗೆ ಕೊಡುವುದನ್ನು ನಿಲ್ಲಿಸಬೇಕು. ಹರಿಜನ ಸಂಘವೆಂದು ಮಾಡಿದ್ದಾರೆ, ನಿಜವಾಗಿಯೂ ಅಲ್ಲಿ ಆಗುತ್ತಿರುವುದನ್ನು ನೋಡಿದರೆ ಸಂಕಟವಾಗುತ್ತದೆ. ಯಾರು ಮುಂದು ವರಿದಿದ್ದಾರೋ, ಯಾರು ವಿದ್ಯಾವಂತರೋ ಅವರು ಸ್ವಾರ್ಥಕ್ಕಾಗಿ ಉಪಯೋಗಿಸಿಕೊಳ್ಳುತ್ತಿದ್ದಾರೆ. ಸರ್ಕಾರ ಕೊಡತಕ್ಕ ಸೌಲಭ್ಯಗಳು ನಿಜವಾಗಿಯೂ ಹರಿಜನರಿಗೆ ತಲಪುವುದಿಲ್ಲ. ಅವರಿಗೆ ತಲಪುತ್ತಿದೆಯೇ ಅಥವ ಇಲ್ಲವೇ ಎಂಬುದನ್ನು ಮಂತ್ರಿಗಳೇ ಹೋಗಿ

(ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ)

ನೋಡಲ. ಯಾರೋ ಕೆಲವರು ಬರತಕ್ಕ ಗ್ರಾಂಟ್ಸಿಲ್ಲ ವನ್ನೂ ಉಪಯೋಗಿಸುತ್ತಾರೆ ತಮ್ಮ ಸ್ವಾರ್ಥಕ್ಕಾಗಿ. ಒಂದೂರಿನಲ್ಲಿ ಒಬ್ಬ ಕಡು ಬಡವನಾದರೂ ಊರಿಗೇ ಕೆಟ್ಟದ್ದಾಗುತ್ತದೆ, ಅನಿಷ್ಟವಾಗುತ್ತದೆ. ಹೇಗೆಂದರೆ, ಅವನು ಹೊಟ್ಟೆಯ ಪಾಡಿಗಾಗಿ ಕಳ್ಳತನ ಮಾಡುತ್ತಾನೆ. ಸಿಕ್ಕಿಬಿದ್ದರೆ ಶಿಕ್ಷೆ ಅನುಭವಿಸುತ್ತಾನೆ. ದೊಡ್ಡವರು ಒಂದು ಪೇಳೆ ಮಾಡಿದರೂ ಅವರು ಯಾವ ಶಿಕ್ಷೆಗೂ ಸಿಕ್ಕುವುದಿಲ್ಲ. ಕಾನೂನುಗಳನ್ನೆಲ್ಲಾ ಯಾವ ರೀತಿ ಅವರ ಕಾರ್ಯಕ್ಕೆ ಅಳವಡಿಸಬೇಕೋ ಆ ರೀತಿ ಅಳವಡಿಸಿ ಕೊಳ್ಳುತ್ತಾರೆ. ಬಡವರಿಗೆ ಮಾತ್ರ ಯಾವ ಕಾನೂನು ರಕ್ಷಣೆಗೆ ಬರುವುದಿಲ್ಲ. ಆದ್ದರಿಂದ ಅವರನ್ನು ಜಾಗ್ರತೆ ವಿದ್ಯಾವಂತರನ್ನಾಗಿ ಮಾಡಿ ಎಂದು ಹೇಳಿದ್ದಾರೆ. ಇನ್ನು ಕೆಲವಾರು ತಿಂಗಳಿನಲ್ಲೇ ಸೆನ್ಸಸ್ ತಯಾರುಮಾಡಿ ಅಂಕಿಅಂಶ ಕಂಡುಹಿಡಿದು ಬಡವರು ಎಷ್ಟು ಜನ ಇದ್ದಾರೆ, ಅವರಿಗೆ ಏನು ಉಪಕಾರವಾಡ ಬಹುದೋ ಅದನ್ನು ಮಾಡಿಯೇ ತೀರುತ್ತೇವೆ, ನಾವು ಇದ್ದಾಗಲೇ ಅದರಲ್ಲೂ ನಮ್ಮ ಡಿಸ್ಟ್ರಿಕ್ಟಿನ ಮಂತ್ರಿಗಳು ನಾವು ಇದ್ದಾಗಲೇ ಮಾಡುತ್ತೇವೆ ಎಂದು ಧೈರ್ಯದಿಂದ ಹೇಳಿ ಅದನ್ನು ನಡೆಸುತ್ತಾರೆ ಎಂದು ನಂಬಿ ನನ್ನ ಮಾತನ್ನು ಮುಗಿಸುತ್ತೇನೆ.

*Sri MAHMOOD SHARIFF (Broadway).—Mr. Speaker Sir, it appears to me that the resolution that has been tabled by my Hon'ble friend Sri Rachiah has got an important aspect about it and deserves to be considered with sympathy and support by Hon'ble Members ranged on both sides of this House. This resolution seeks to draw the attention of the Government to the necessity to promote and develop the all-round progress of the weaker sections of our people, including of course, our Harijan brethren. Our Constitution, Sir, has been so framed as not to deny to any section of the people equal opportunities for the full growth and does not place any handicaps, so that no section of the people may be denied the benefit of these advantages, irrespective of caste, creed and colour. It is only on this back-ground that we have been endeavouring these ten years to build a classless society based upon the economic, educational and cultural uniformity. But let me just now submit to you, Sir, that our efforts, so far as the directives that we have received from time to time from the Centre are concerned have remained unfulfilled and our objectives remain unfulfilled. The tardy implementation, if there is any implementation at all, leads us nowhere. It appears to me, Sir, that unless these persons who are in charge of these directives, persons who have to implement these directives, unless there is a certain amount of earnestness and desire on their part to bring about reform, it appears to me that nothing is going to happen. Unless their outlook changes for the better, nothing can happen. Sir, there is no need for me to say that our people in this country have been living under different levels of economic and cultural standards and it appears that there is no need for me to say that it is useless to apply the same rule in the case of all the people unless we place at their disposal the means required for their full development and growth. Sir, it is in this back-ground that the problem of the backward people has to be considered. It is also in this background that we have to appreciate the difficulties that the Harijan friends are undergoing. It is in this background that we have to consider the difficulties which these people are experiencing in their daily life. Sir, let me just now tell my Harijan brethern that we have nothing but sympathy for them in their plight and we appreciate their difficulties. These people do not know the potentia influence which they can bring to bear on the destinies of India. These people have been subject to, may I say, most abominable treatment on the part of some persons and it is very necessary therefore to see that this amount of awakening that is already there, is speeded up.

Now, Sir, coming to the minorities question, I have to say that the balance has been tilted on account of the emergency into the picture of linguistic minorities. On account of the fact that we have drawn the map of India on linguistic basis, it is very necessary that this problem of minorities as well as the problem of backward classes have to be very carefully and delicately handled. It is on this account that, only about three years ago, the Government of India appointed a commission known as the Backward Class Commission solely with the purpose of improving the lot of backward classes. This Commission went round the whole of India, visited several places and prepared a report. Unfortunately, this Report did not

meet with the wishes of the Government of India and that was shelved. But regarding giving aid to and improvement of backward classes, they gave it due importance and they appointed a minority committee and this minority committee was entrutsed with the task of collecting the grievances from those people who came under this category of backward classes and they made recommendations to the Central Government in order to rectify the grievances which were pressed upon the attention of the Government by the backward classes. It seems to me, Sir, that only last year under the leadership of Humayun Kabir this Committee has been revived and it has been made to function with greater efficiency than before.

It seems to me, Sir, that so far as Mysore is concerned, you know that it was at the time of Mr. Miller who was the Chief Judge of the High Court of Mysore that he was called upon to give a report on the different aspects of the problem of the backward classes and it was 30 to 40 years ago that this report was formulated. Much water has flown under the brigde since that report was prepared and conditions have changed. I therefore say that a storng committee consisting of very honest and conscientious men, must be constituted so that they may go round and collect the grievances of all those persons, not only Harijan friends, and ascertain what they want. I personally say, give them whatever they want. If they want 15 per cent, give them. If they want 20 per cent, let them have it, because they are our brethren and have suffered many handicaps. They have suffered and they have been subjected to abominable treatment, as I already submitted. What I say is, so far as the recommendations of the Miller Committee is concerned, rules have been framed determining the ratio in which backward class people should be given admission in the Government colleges. I say, 20 per cent seats may be set apart for Harijans, 35 per cent has to be allotted to those persons who are first-class men on merit and the balance of 45 per cent has to be distributed among the 30 or 40 backward communities.

The whole thing has to be reorientated. A new scheme has to be evolved under which everybody, whether a Harijan or a non-Harijan, any one who is suffering hardship and difficulty and social disability, must be given appropriate help. So far as the nomenclature of the backward classes is concerned, it is not happy. A new nomenclature has to be planned so that it may convey a happy impression.

So far as Muslims are concerned—I am not pleading for separatist tendencies and attitudes for Muslims—according to the rules only 2½ per cent of the scholarships have to be given to them. In old Mysore there were 7 lakhs and in New Mysore we have 20 lakhs of Muslims. These people are devoid of means of employment. In the olden days, a large number of them were in service, in the Police Department and in many other fields. Since ten years, such a treatment has been meted out to them that we have been neglected from all sides. I appeal to the Government to extend their sympathetic consideration to this community and to help them in ample measure. The Muslims form twenty per cent of the population in new Mysore. There are twenty lakhs. They deserve generous treatment because they are not numerically superior. The numerically superior community will have to extend such concessions as are necessary to be given to them.

There is one other grievance I want to place before this House with your permission. Take for example the Elections. You know that the Constitution has laid a condition that one lakh of people should have one seat in the lower House. In new Mysore, we are 20 lakhs. According to the rule or convention or understanding, we will have to be given 20 seats in the Lower House. Unfortunately, in spite of repeated demands, not only to the Centre but also to the person in charge of the Congress Party, these twenty lakhs of people have been represented by seven or eight people only. Therefore I draw the attention of the Hon'ble Minister in charge to see that

(SRI MAHMOOD SHARIFF)

these shortcomings are surmounted and such treatment as may be necessary be given to this community. With these remarks I very heartily support the resolution which was tabled by my Hon'ble friend Sri Rachiah, I insist upon the Government to kindly see that a committee consisting of persons of light and leading, a committee consisting of conscientious and honest people, come forward in order to place before the Government such measures as to satisfy all sections of the people whether Harijans or Muslims or Brahmins or every one as a matter of fact. I have very great pleasure in supporting this resolution tabled by Sri Rachiah.

[Sri S. P. TALWALKAR (Raibag) spoke in Marathi.]

The House adjourned for Lunch at Three of the Clock and reassembled at Thirty-five Minutes past Three of the Clock.

[MR. DEPUTY SPEAKER in the Chair]

[Sri S. P. TALWALKAR continued in Marathi.]

* Sri V. P. DEENADAYALU NAIDU (Cubbonpet).—May I make one submission? While my learned friend is speaking, I do not know whether the Chair can follow his speech. I am sure that the Minister cannot follow his speech and I do not think there is anybody here to transcribe and explain to us what he is speaking. I submit that at least a resume of the speech made may kindly be prepared and cyclostyled copies distributed to the members so that they can know what he said. Some arrangement must be made in that regard. I do not know how the Minister is going to reply to the points raised by him.

Mr. DEPUTY SPEAKER.—Tape recording is the only arrangement that can be thought of at present.

Sri V. P. DEENADAYALU NAIDU.—I am not inclined to speak in Telugu. I will say why. There is a constitutional provision for speaking in any language. I am sure the Minister will reply to that because he knows something of Telugu. When a member speaks on the floor of the House in a language which cannot be followed by other members, some arrangement must be made for enabling other members to know what he has said.

Sri R. CHENNIGARAMAIAH.—We can catch some salient points.

Sri MAHMOOD SHARIFF.—This question came on the floor of the Constituent Assembly of India. The President of India was occupying the chair. I was speaking in Urdu and some member said that when members did not follow Urdu, I might be asked to speak in English. Then I insisted on speaking in Urdu. A ruling was given to the effect that anybody could speak whatever he had to speak in his mother tongue. Immediately that ruling was given, members who knew Kannada spoke in Kannada and those who knew Telugu spoke in Telugu and so on. Afterwards the Chair was pleased to instruct that after a speech was made, a resume might be given so that it might be embodied in the proceedings.

Sri V. P. DEENADAYALU NAIDU.—What I am urging is that the speech made by a member must correctly go into the proceedings. Have you got any arrangement by which a speech a member makes goes correctly into the record? It is not some sort of translation in English. His speech must be accurately reported and it must be printed in the language in which he has spoken, whether it is Marathi or any other language.

Every member has got a right to see that his speech goes correctly into the proceedings. What I want to know is whether there is any arrangement to see that the speech a member makes on the floor of the House goes into print correctly. I do not want any speech mutilated or cut down.

Mr. DEPUTY SPEAKER.—I understand that after the speech is made, the member gives a summary of it in writing.

[Sri S. P. TALWALKAR continued his speech in Marathi.]

Sri V. S. PATIL.—On a point of information, Sir. I have given notice of an adjournment motion regarding the suicide committed by one Sri K. N. Shivalinganna and I have received a reply stating that the matter is not of urgency within the meaning of Rule 38. When I referred to Rule 38, I found that it was quite different. Rule 38 does not refer to Chapter VIII.

Mr. DEPUTY SPEAKER.—Please send me a representation and I will examine it.

